ಬಂದ ನೋಡು, ಅಳಿಯ ಯಾವಗ ಬತ್ತಾರೆ ಬತ್ತಾರೆ ಅಮ್ತ ಕನವರಿಸುತ್ತಿದ್ದೆ. ನೆನೆದವರು ಮನದಲ್ಲಿ ಅಂದಂಗೆ ಬಂದ್ರು' ಎಂದಳು ನಗುತ್ತ. ಅವನ ಕೈಯಲ್ಲಿದ್ದ ಪೊಟ್ಟಣಗಳನ್ನು ಇಸಿದುಕೊಂಡು ಒಳ ಹೋಗಿ, ಅವುಗಳನ್ನು ಮೂಲೆಯಲ್ಲಿ ಇಟ್ಟು, ಮರದ ಪೆಟ್ಟಿಗೆಯ ಮೇಲಿದ್ದ ಒಂದು ಸೀರೆಯಲ್ಲಿ ಕಟ್ಟಿ ಇಡಲಾಗಿದ್ದ ಗಂಟನ್ನು ಬಿಚ್ಚಿ, ಅದರಿಂದ ಒಂದು ಶುಭ್ರವಾದ ಟವಲನ್ನು ತೆಗೆದುಕೊಂಡು ಹೊರ ಹೋದಳು. ಅಷ್ಟೊತ್ತಿಗೆ ಪ್ರಸಾದ ಮುಖ, ಕೈ ಕಾಲು ತೊಳೆದುಕೊಂಡು ಬಂದು ಅಂಗಳದಲ್ಲಿ ನಿಂತಿದ್ದ. ಇವಳು ಕೊಟ್ಟ ಟವಲನ್ನು ಇಸಕೊಂಡು ಒರೆಸಿಕೊಂಡ. ಸೂರ್ಯ ಸಂಪೂರ್ಣವಾಗಿ ಮುಳುಗಿ ಹೋಗಿದ್ದ. ನಕ್ಷತ್ರಗಳು ರಾತ್ರಿಯನ್ನು ಅಲಂಕರಿಸಲು ತವಕಿಸುತ್ತಿದ್ದವು.

ಎರಡು ಅಂಕಣದ ಮಾಳಿಗೆ ಮನೆ. ಅಡುಗೆಕೋಣೆ ಮತ್ತು, ಅದರ ಮುಂದಿನದು ನಡುಮನೆ. ಅಲ್ಲಿಯೇ ಬಂದವರು ಮಲಗಬೇಕಿತ್ತು. ಅಡುಗೆಮನೆಯಲ್ಲೊಂದು ಮತ್ತು ನಡುಮನೆಯಲ್ಲೊಂದು ಗವಾಕ್ಷಿ. ಅದರಿಂದನೇ ಗಾಳಿ ಬೆಳಕು. ಅಕ್ಕಪಕ್ಕ ಈ ಮನೆಗೆ ಹೊಂದಿಕೊಂಡಿದ್ದರಿಂದ ಅಕ್ಕಪಕ್ಕದ ಗೋಡೆಗಳಲ್ಲಿ ಕಿಟಕಿಗಳಿರಲಿಲ್ಲ. ಆದರೆ, ಅಡುಗೆಮನೆಯಲ್ಲೊಂದು ಮತ್ತು ನಡುಮನೆಯ ಮುಂಬಾಗಿಲಿನ ಪಕ್ಕ ಒಂದು ಕಿಟಕಿ ಇದ್ದವು. ಮನೆಯಲ್ಲಿ ಎರಡು ಕಂಚಿನ ಎರಡು ತಟ್ಟೆಗಳು, ಒಂದು ತಂಬಿಗೆ ನಾಕು ಲೋಟಗಳನ್ನು ಬಿಟ್ಟರೆ ಉಳಿದ ಎಲ್ಲ ಅಡುಗೆ ಪರಿಕರಗಳು ಮತ್ತು ದವಸ ತುಂಬಿಕೊಳ್ಳುವ ಎಲ್ಲ ವಸ್ತುಗಳು ಮಣ್ಣಿನವು. ಬಟ್ಟೆಗಳನ್ನು ಒಂದು ದೊಡ್ಡ ಮರದ ಪೆಟ್ಟಿಗೆಯಲ್ಲಿ ಇಡಲಾಗಿತ್ತು. ಮತ್ತು ಮತ್ತಷ್ಟನ್ನು ಅದರ ಮೇಲೆ ಮೂರು ಬಟ್ಟೆಯ ಗಂಟುಗಳಲ್ಲಿ ಕಟ್ಟಿ ಇಡಲಾಗಿತ್ತು. ಮುಂದಿನ ಅಂಗಳವನ್ನು ತೆಂಗಿನ ಗರಿಗಳು ಮೇಲ್ಹಾವಣೆಯಾಗಿ ಬಿಸಿಲಿನಿಂದ ರಕ್ಷಿಸಿದ್ದವು. ಅದರ ಮುಂದೆ ಮತ್ತಷ್ಟು ಅಂಗಳ. ಅದರ ಪಕ್ಕದಲ್ಲಿ ಬಚ್ಚಲು ಮನೆ. ಬಹಿರ್ದೆಸೆಗೆ ಎಲ್ಲರಂತೆ ಇವರೂ ಸಹ ತೋಟದ ಸಾಲು, ಹೊಲಗಳ ಕಡೆ ಮತ್ತು ಸೀಮೆ ಜಾಲಿಗಳಿಂದ ತುಂಬಿರುವ ಕುರುಚಲು ಬಯಲಿಗೆ ಹೋಗುತ್ತಿದ್ದರು.

ರಾತ್ರಿ ಊಟವಾದ ಬಳಿಕ ಚುಕ್ಕಿ ಮತ್ತು ಪ್ರಸಾದ ನಡುಮನೆಯಲ್ಲಿ ಮಲಗಿದರು. ಲಕ್ಕಮ್ಮ ಮತ್ತು ಅವಳ ಗಂಡ ಹೊರಗಡೆ ಚಪ್ಪರದ ಅಡಿಯಲ್ಲಿ ಮಲಗಿದರು. ಎಲ್ಲರೂ ನಿದ್ರೆಗೆ ಜಾರಿದ್ದರು. ಚುಕ್ಕಿಯ ಬಾಯಿಂದ, 'ಅದೇ ವಾಸನೆ, ಅವೇ ಕಣ್ಣುಗಳು, ಆಹಾ ನೇರಳೆ ಗಿಡದ ನೆರಳು. ಅದೇ ಕೊನೆ, ಮತ್ತೆ ನಿನ್ನ ಕಾಮ್ಲೇ ಇಲ್ಲ, ಎಲ್ಲಿದಿಯ ಏನ್ಕತೆ, ಊರಗೆ ಇದೀಯಾ ಎಲ್ಲಿದಿಯ, ದೀಪದ ಬೆಳಕಲ್ಲಿ ಕಾಣಬೇಕು ನಿನ್ನ, ನಿನ್ನ ಆ ಕಣ್ಣುಗಳಲ್ಲಿನ ಬೆಳಕು ಇನ್ನೂ ಇದೆ. ಚೆಂಡು ಹೂವಿನ ವಾಸ್ನೆ, ತಂಗಟೆ ಹೂವುಗಳ ಶುಂಗಾರ, ಎತ್ತುಗಳ ಮೆರವಣಿಗೆ, ಎಲ್ಲಿ ನೋಡಿದರೆ ಅಲ್ಲಿ ಬೆಳಗುವ ದೀಪಗಳು. ಕಾಮ್ತೀಯ. ನೋಡಬೇಕು ಅಮ್ಮೈತೆ ನನ್ನ ಎದೆ, ಈ ಕತ್ತಲಲ್ಲೂ ಜಂತಿಯ ಮೇಲಿನ ಬಣ್ಣದ ನವಿಲು ರಂಗೋಲಿಯ ಗೆರೆಗಳಿಂದ ಆಚೆ ಹೋಗುತ್ತಿದೆ. ನಿನ್ನ ಹತ್ತಿರನೇ ಬರುತ್ತಿದೆ. ನವಿಲೆ ನವಿಲೆ...' ವಾಕ್ಯಗಳು. ಪ್ರಸಾದನಿಗೆ ಕೊನೆಯ ಈ ಎರಡು ಪದಗಳು 'ನವಿಲೆ, ನವಿಲೆ' ಎಚ್ಚರಗೊಳಿಸಿದವು. 'ಚುಕ್ಕಿ, ಚುಕ್ಕಿ ಏನಾತಮಿ, ಎಲ್ಲಿದಾವೆ ನವಿಲು ಯಾಕ ಕನವರಿಸಿಕೆಮ್ಮಿದಿಯಾ?' ಎಂದ. ಹೊರಗಡೆ ಲಕ್ಕಮ್ಮ, 'ಈ ಪಿಳ್ಳಿಗೆ ಅದೇನು ಸ್ವಪ್ನ ಬೀಳ್ತವಪ್ಪ ಅಮ್ಮೀನಿ. ನಾಳಿಕ್ಕೆಮೊದಲು ಹೊಲೆರ ಜಯರಾಮಣ್ಣಂತಗೆ ಒಂದು ಬೇಟೆ ಚೀಟಿ ಕಟ್ಟಿಸಬೇಕು' ಎನ್ನುವ ಮಾತುಗಳು ಇವನ ಕಿವಿಗೆ ಬಿದ್ದವು. ಚುಕ್ಕಿ ಎದ್ದಳು. ಎದ್ದು, ತನ್ನ ಗಂಡನನ್ನು, 'ಯಾಕಿನ್ನೂ ಎದ್ದಿದಿರಾ, ಹೊಸ ಜಾಗ ಅಮ್ತನಾ, ಸುಮ್ಮನೆ ಮನಿಕಳ್ರಿ, ನಿದ್ರೆ ಹತ್ತುತಾವೆ' ಅಂದಳು.

ನಸುಕಿಗೆ ತಾಯಿ ಮತ್ತು ಮಗಳು ಎದ್ದರು. ಲಕ್ಕಮ್ಮನಿಗೆ ತನ್ನ ಮಗಳು ಆಡಿದ ವಾಕ್ಯಗಳು ತನ್ನ ಮನಸ್ಸಿನ ಮೂಲೆಯಲ್ಲಿ ಅಸ್ಪಷ್ಟವಾಗಿದ್ದರೂ, ಮಗಳು ಚುಕ್ಕಿ ಮಾತ್ರ ಸಹಜವಾಗಿ ರಾತ್ರಿಯ ಯಾವ ನೆನಪು ಇಲ್ಲದಂತೆ ಇರುವುದನ್ನು ಗಮನಿಸಿದಳು. ಬೆಳಗಿನ ಕಾರ್ಯಗಳನ್ನು ಮುಗಿಸಿ, ಕಾಫಿ ಮಾಡಿದರು. ಅಷ್ಟೊತ್ತಿಗೆ ಚುಕ್ಕಿಯ ಗಂಡ ಪ್ರಸಾದ ಎದ್ದಿದ್ದ. ಬಚ್ಚಲಿಗೆ ಹೋಗಿ ಬಾಯನ್ನು ಮುಕ್ಕಳಿಸಿ